ಸಹಕಾರಿ ವಲಯದಲ್ಲಿ-18, ಸಾರ್ವಜನಿಕ ವಲಯದಲ್ಲಿ-02 ಜಂಟಿ ವಲಯದಲ್ಲಿ-01, ಖಾಸಗಿ ವಲಯದಲ್ಲಿ-14 ಇರುತ್ತವೆ.

ಆ) ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಪ್ರತಿದಿನ 86,500 ಮೆ.ಟನ್ ಕಬ್ಬನ್ನು ಅರೆಯುವ ಸಾಮರ್ಥ್ಯವನ್ನು ಹೊಂದಿದೆ. 180 ದಿನಗಳ ಒಂದು ಹಂಗಾಮಿನಲ್ಲಿ ಈ ಎಲ್ಲಾ ಸಕ್ಕರೆ ಕಾರ್ಖಾನೆಗಳು ಒಟ್ಟು 155 ಲಕ್ಷ ಟನ್ ಕಬ್ಬು ನುರಿಸಬಲ್ಲವಾಗಿದೆ.

ಇ) ಬೆಲ್ಲ ಮತ್ತು ಖಂಡಸಾರಿ ಘಟಕಗಳಿಗೆ ಸುಮಾರು 65 ಲಕ್ಷ ಟನ್ ಕಬ್ಬು ಸರಬರಾಜು ಆಗುತ್ತಿದೆ.

ಈ) ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಸೆಪ್ಟೆಂಬರ್-2000ರ ಅಂತ್ಯಕ್ಕೆ, 9,16,986 ಮೆ.ಟನ್ ದಾಸ್ತಾನು ಇದ್ದು ಅದರ ಮೌಲ್ಯ ಸುಮಾರು ರೂ. 1,192 ಕೋಟಿ ಆಗಬಹುದಾಗಿದೆ.

ಪುತ್ತೂರು ಕ್ಷೇತ್ರದಲ್ಲಿ ಸೇತುವೆ ನಿರ್ಮಾಣ

3167 -ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಬಾರ್ಡ್ ಯೋಜನೆಯಡಿ ವಿಧಾನಸಭಾಕ್ಷೇತ್ರವಾರು ಹಂಚಿಕೆಯಲ್ಲಿ ಪುತ್ತೂರು ವಿಧಾನಸಭಾ ಕ್ಷೇತ್ರಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಇತರ ಕ್ಷೇತ್ರಗಳಿಗಿಂತ ಕಡಿಮೆ ಅನುದಾನ ಹಂಚಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಜಿಲ್ಲಾವಾರು, ಕ್ಷೇತ್ರವಾರು ಅನುದಾನ ವಿಂಗಡಣೆಯ ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ, ಈ ತಾರತಮ್ಯಕ್ಕೆ ಕಾರಣವೇನು? ಮತ್ತು ಈ ತಾರತಮ್ಯ ನಿವಾರಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಇ) ಸರ್ಕಾರ 100 ಸೇತುವೆ ಯೋಜನೆಯಡಿ ಪುತ್ತೂರು ವಿಧಾನಸಭಾ ಕ್ಷೇತ್ರಕ್ಕೆ ಸೇತುವೆ ರಚನೆ ಕಾಮಗಾರಿ ಮಂಜೂರಾತಿ ನೀಡಲಾಗಿದೆಯೇ?

ಈ) ಹಾಗಿಲ್ಲದಿದ್ದಲ್ಲಿ, ಈ ವಿಚಾರದಲ್ಲಿ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ನಬಾರ್ಡ್ ಯೋಜನೆಯಡಿ ಅನುದಾನದ ಹಂಚಿಕೆ ಉದ್ಭವಿಸುವುದಿಲ್ಲ. ಆದಾಗ್ಯೂ ಪುತ್ತೂರು ಕ್ಷೇತ್ರದಲ್ಲಿ ಕಡಿಮೆ ಮೊತ್ತದ ಕಾಮಗಾರಿಗಳು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಲೋಕೋಪಯೋಗಿ ಇಲಾಖೆಯಡಿ ಮಂಜೂರಾದ ಹಾಗೂ ಮಂಜೂರಾಗಬೇಕಿರುವ ಕಾಮಗಾರಿಗಳ ಕ್ಷೇತ್ರವಾರು ವಿವರ ಕೆಳಕಂಡಂತೆ ಇದೆ.

ಕ. ಸಂ.	ಕ್ಷೇತ್ರ	ಮಂಜೂರಾದ ಕಾಮಗಾರಿಗಳು		ಮಂಜೂರಾಗ ಬೇಕಿರುವ ಕಾಮಗಾರಿಗಳು		ಒಟ್ಟು		ನಬಾರ್ಡ್ ಆರ್‌ಐಡಿಎಫ್ 6 ರಡಿ ಗುರುತಿಸಿರುವ ಕಾಮಗಾರಿಗಳು	
		ಸಂಖ್ಯೆ	ಮೊತ್ತ ಲಕ್ಷ ರೂಗಳಲ್ಲಿ	ಸಂಖ್ಯೆ	ಮೊತ್ತ ಲಕ್ಷ ರೂಗಳಲ್ಲಿ	ಸಂಖ್ಯೆ	ಮೊತ್ತ ಲಕ್ಷ ರೂಗಳಲ್ಲಿ	ಸಂಖ್ಯೆ	ಮೊತ್ತ ಲಕ್ಷ ರೂಗಳಲ್ಲಿ
1.	ಬೆಳ್ತಂಗಡಿ	7	328	0	0	7	328	2	120
2.	ಬಂಟ್ವಾಳ	7	178	2	65	9	243	6	235
3.	ಮಂಗಳೂರು	0	0.00	0	0	0	0.00	0	0
4.	ಮೂಡಬಿದ್ರೆ	8	327.40	1	30	9	357.40	1	50
5.	ಪುತ್ತೂರು	7	162	1	80.0	8	242	3	110
6.	ಸುಳ್ಯ	12	383	1	44.0	13	427	1	30
7.	ಸೂರತ್ಕಲ್	2	44	1	25.0	8	69	4	150
8.	ಉಳ್ಳಾಲ	3	64	1	40.0	4	104	1	80
9.	ವಿಟ್ಲ	7	311	0	0.00	7	311	2	65

ಅ) ನಬಾರ್ಡ್‌ನ ನಿಯಮಾವಳಿಗೆ ಒಪ್ಪುವಂತ ಕಾಮಗಾರಿಗಳು ಮಾತ್ರ ಮಂಜೂರಾಗುವುದರಿಂದ ಈ ವ್ಯತ್ಯಾಸವಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಆರ್‌ಐಡಿಎಫ್ 6 ರಡಿ ಸರ್ಕಾರ 110ಲಕ್ಷ ರೂ. ಮೊತ್ತದ 3 ಕಾಮಗಾರಿಗಳನ್ನು ಗುರುತಿಸಿದೆ.

ಇ) ಗುಂಡ್ಯ ಕುಲಗುಂದ ರಸ್ತೆಯ 0.40 ನೇ ಕಿಮೀನಲ್ಲಿ ಸೇತುವೆ ನಿರ್ಮಾಣದ ಒಂದು ಕಾಮಗಾರಿ ಮಂಜೂರಾಗಿದೆ.

ಈ) ಉದ್ಭವಿಸುವುದಿಲ್ಲ.

ಜಿಲ್ಲಾ ವಲಯದಲ್ಲಿ ಬಯಲು ರಂಗ ಮಂದಿರ ನಿರ್ಮಾಣ ಮಾಡುವ ಬಗ್ಗೆ

3168 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಯುವಜನ ಸೇವಾ ಇಲಾಖೆಯ ಆಶ್ರಯದಲ್ಲಿ ಜಿಲ್ಲಾ ವಲಯಗಳಲ್ಲಿ ಬಯಲುರಂಗ ಮಂದರಿಗಳನ್ನು ನಿರ್ಮಿಸಲು ಕಳೆದ 3 ವರ್ಷಗಳಲ್ಲಿ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನದ ಮೊತ್ತವೆಷ್ಟು ?*